# ವಿದ್ವಾನ್ ರಂಗನಾಥ ಶರ್ಮಾರಿಗೆ ತವರಿನಲ್ಲಿ ಆದ್ದೂರಿಯ ಸನ್ಮಾನ

ಉಳವಿ : ನಿತ್ಯ ಜೀವನದಲ್ಲಿ ಹೊಸ ಚೇತನದ ದಿಕ್ಕನ್ನು ಸೂಚಿಸುವ ಧರ್ಮಶಾಸ್ತ್ರಗಳು ತತ್ವಾಧಾರಿತ ವೇದಸೂತ್ರಗಳು, ಪರಂಪರೆಯಿಂದ ಬಂದ ಸಂಸ್ಕೃತಿಗಳು, ವರ್ತಮಾನ ಕಾಲದ ಮಹಿಮೆಯಿಂದ ಇಂದಿನ ಜನರಿಗೆ ವೇದ ವಿದ್ಯೆಗಳ ಮೂಲತತ್ವಗಳು, ಧರ್ಮ ಸಂಸ್ಕೃತಿಗಳ ನಡವಳಿಕೆಗಳು ಬೇಡವಾಗಿದೆ.

ಸಮಾಜ ಮತ್ತು ಜನತೆ ಉದ್ಧಾರವಾಗಬೇಕಾದರೆ ಸಮಾಜದ ಪ್ರತಿಯೊಂದು ಕುಟುಂಬದ ಪುರುಷ, ಮಹಿಳೆಯರು ಆತ್ಮಬೋಧನೆಯ ಆಧ್ಯಾತ್ಮಿಕ ಚಿಂತನೆಗೆ ಪೂರಕವಾಗಬಲ್ಲ ವೇದ ಮತ್ತು ಧರ್ಮ ಸಂಸ್ಕೃತಿಗಳ ಪರಿಪಾಲನೆಯಲ್ಲಿ ಏಕತಾ ಮನೋಭಾವವನ್ನು ಬೆಳೆಸಿಕೊಂಡು ನಿತ್ಯ ಜೀವನದ ಸಂಪ್ರದಾಯಬದ್ಧವಾಗಿ ಸಮಾಜದಲ್ಲಿ ರೂಢಿಗೆ ತರಬೇಕು. ಇದರಿಂದ ಮುಂದಿನ ಪೀಳಿಗೆಯವರಿಗೆ ವೇದ ವಿದ್ಯೆಗಳ ಸತ್ವ, ಸಂಸ್ಕೃತಿಗಳ ನೀತಿ ಧೋರಣೆ, ಸಮಾಜದ ಒಳಿತಿನ ಮೇಲೆ ಪ್ರಭಾವ ಬೀರಬಲ್ಲದು. ಇವುಗಳನ್ನು ಉಳಿಸಿ, ಬೆಳೆಸುವಲ್ಲಿ ಹವ್ಯಕ ಸಮಾಜ ಬಾಂಧವರು ದೃಢ ಸಂಕಲ್ಪ ಮಾಡಬೇಕು ಎಂದು,

ಸಂಸ್ಕೃತ ವಿದ್ವಾನ್ ಮಹಾಮಹೋಪಾಧ್ಯಾಯ ಬಿರುದು ಬಾವಲಿಗಳಿಂದ ರಾಷ್ಟ್ರ, ರಾಜ್ಯ ಪ್ರಶಸ್ತಿ ಪುರಸ್ಕೃತವಾದ ನಡಹಳ್ಳಿ ರಂಗನಾಥ ಶರ್ಮ ಇವರು ಹವ್ಯಕ ಸಮಾಜ ಬಾಂಧವರಿಗೆ ಕರೆ ನೀಡಿದರು. ಇತ್ತೀಚೆಗೆ ಕ್ಯಾಸನೂರು ಸೀಮಾ ಪ್ರತಿನಿಧಿ ಪರಿಷತ್, ತಲಕಾಲುಕೊಪ್ಪ ಗ್ರಾಮ ದೇವಸ್ಥಾನದ ಆವರಣದಲ್ಲಿ ನಡೆಸಿದ ಸನ್ಮಾನ ಸಮಾರಂಭದಲ್ಲಿ ಗೌರವ ಸ್ವೀಕರಿಸಿದ ಇವರು ಮೇಲಿನಂತೆ ನುಡಿದು ತಮ್ಮ ತವರಿನ ಬಂಧು ಬಾಂಧವರು ನೀಡಿದ ಆತ್ಮೀಯ ಗೌರವಾರ್ಪಣೆಗೆ ತಾವು ಸದಾ ಋಣಿಯಾಗಿರುವುದಾಗಿ ಹೇಳಿದರು.

ರಂಗನಾಥ ಶರ್ಮಾ ಇವರ ಕುರಿತು ಅಭಿನಂದನಾ ಭಾಷಣ ಮಾಡಿದ ಎಂ.ಆರ್. ಲಕ್ಷ್ಮೀನಾರಾಯಣರಾವ್ ಅಮಚಿ ಮಾತನಾಡಿ ಪ್ರಶಸ್ತಿಗಾಗಿ ಪರದಾಡುವ ದಂಡೇ ತಯಾರಾದ ಈ ಕಾಲದಲ್ಲಿ ಶರ್ಮರಿಗೆ ದೊರೆತಿಂಥೆಯ ಸಾರ್ಥಕ ಸೇವೆಯ ಹೆಗ್ಗಳಿಕೆಯ ಪರಮಾಲೆಯಾಗಿದೆ ಎಂದವರು ಹೇಳಿ, ರಂಗನಾಥ ಶರ್ಮರ ಜೀವನ ಚರಿತೆಯ ಕಷ್ಟ - ಸುಖಗಳ ಪರಿಚಯ ಮಾಡಿ ಸಮಾಜದ ಪರವಾಗಿ ಅಭಿನಂದಿಸಿದರು.

ಅತಿಥೇಯರಾಗಿ ಆಗಮಿಸಿದ ಸಿದ್ದಾಪುರದ ಶೃಂಗೇರಿ ಶಂಕರಮಠದ ಧರ್ಮದರ್ಶಿಗಳಾದ ದೊಡ್ಮನೆ ಗಣೇಶ ಹೆಗಡೆಯವರು ಶರ್ಮ ಅವರನ್ನು ಅಭಿನಂದಿಸಿ ತಮ್ಮ ತೋಟದಲ್ಲಿ ಬೆಳೆಸಿದ ರುದ್ರಾಕ್ಷಿ ಗಿಡದಿಂದ ತೆಗೆದ ರುದ್ರಾಕ್ಷಿಗಳನ್ನು ಮಾಲೆಯ ರೂಪವಾಗಿ ತಯಾರಿಸಿ ರಂಗನಾಥ ಶರ್ಮರಿಗೆ ಸಮರ್ಪಿಸಿ ಶಾಲು ಹೊದಿಸಿ ಗೌರವಿಸಿದರು.

ಕ್ಯಾಸನೂರು ಸೀಮಾ ಪರಿಷತ್, ರಂಗನಾಥ ಶರ್ಮರಿಗೆ ಭಿನ್ನವತ್ತಳೆ ಮತ್ತು ನೆನಪಿನ ಸ್ಮರಣಿಕೆ ನೀಡಿ ಶಾಲು ಹೊದಿಸಿ ಗೌರವಿಸಿತು. ಇದೇ ಸಂದರ್ಭದಲ್ಲಿ ಸ್ಥಳೀಯ ಸಂಘ ಸಂಸ್ಥೆಗಳು ವೈಯಕ್ತಿಕವಾಗಿ ಹಾರಗಳನ್ನು ನೀಡಿ ಶುಭ ಕೋರಿದರು. ವಿದ್ವಾನ್ ಎನ್.ವಿ. ಭಟ್, ಬರಿಗೆ ಹಾಗೂ ವೆಂಕಟಗಿರಿ ಜೋಯ್ಸ್ ಕಲಸೆ ಇವರುಗಳು ರಂಗನಾಥ ಶರ್ಮರ ಕುರಿತು ಸಂಸ್ಕೃತ ಭಾಷೆಯಲ್ಲಿ ರಚಿಸಿದ ಮಾನ ಪತ್ರವನ್ನು ಓದಿ ಮಹಾಮಹೋಪಾಧ್ಯಾಯ ಬಿರುದು ಪಡೆದ ಶರ್ಮರಿಗೆ ನೀಡಿದರು.

ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿದ ಮಾಜಿ ಶಾಸಕ ಹವ್ಯಕ ಸಮಾಜದ ಹಿರಿಯ ಧುರೀಣರಾದ ಎಲ್.ಟಿ. ತಿಮ್ಮಪ್ಪ ಹೆಗಡೆಯವರು ಮಾತನಾಡಿ, ಹೃದಯವಂತಿಕೆ, ಸತ್ಯದ ತತ್ವನಿಷ್ಠತೆ ಮತ್ತು ಒಂದು ವಿಷಯದ ಮೇಲೆ ಅಧ್ಯಯನದ ಸಂಶೋಧನಾ ದೃಷ್ಟಿ ಏಕಾಗ್ರತೆಯ ಶ್ರಮದಿಂದ ಸಮಾಜಕ್ಕೆ ರಾಷ್ಟ್ರಕ್ಕೆ ಸಮರ್ಪಿಸಬೇಕೆಂಬ ಭಾವನೆಯು ಯಾವ ವ್ಯಕ್ತಿಯಲ್ಲಿ ಇರುತ್ತದೆಯೋ ಇಂಥವರನ್ನು ಗುರುತಿಸಿ ಇಡೀ ರಾಷ್ಟ್ರವೇ ಗೌರವಿಸುತ್ತದೆ ಎಂದು ಹೇಳಿದ ಹೆಗಡೆಯವರು

ಅನಾದಿ ಕಾಲದಿಂದಿರುವ ಸಂಸ್ಕೃತ ಭಾಷೆಯಲ್ಲಿ ಅದಮ್ಯ ಆಸಕ್ತಿ ತೋರಿದ ರಂಗನಾಥ ಶರ್ಮರು ಅಧ್ಯಯನ ಅಧ್ಯಾಪನ ಮಾಡಿ, ವಾಲ್ಮೀಕಿ, ವ್ಯಾಸ ಮಹಾ ಋಷಿಗಳಿಗೆ ಸಮಾಂತರವಾಗಿ ಕಲಿಯುಗದ ಮಹಾಋಷಿಗಳಿಗೆ ತ್ರಿಭಾಷಾ ಪಾಂಡಿತ್ಯದ ಅಧ್ಯಯನಶೀಲರಾಗಿ, ಸಂಸ್ಕೃತದಿಂದ 50ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಕನ್ನಡಕ್ಕೆ ಅನುವಾದಿಸಿ ಸಂಸ್ಕೃತ ಭಾಷೆಯಲ್ಲಿಯೇ ಅನೇಕ ಗ್ರಂಥಗಳನ್ನು ಬರೆದು ಸಮಾಜಕ್ಕೆ ಮತ್ತು ರಾಷ್ಟ್ರಕ್ಕೆ ತಮ್ಮ ತ್ಯಾಗ ಮನೋಭಾವದಿಂದ ಸಮರ್ಪಿಸಿದ್ದಾರೆ. ಇದನ್ನು ಗುರುತಿಸಿದ ಕೇಂದ್ರ ಸರ್ಕಾರ 40 ವರ್ಷಗಳಿಂದೀಚೆಗೆ ಯಾರಿಗೂ ಲಭಿಸದ ಮಹಾಮಹೋಪಾಧ್ಯಾಯ ಎಂಬ ಬಿರುದಾಂಕಿತ ರಾಷ್ಟ್ರ ಪ್ರಶಸ್ತಿಯನ್ನು ಈ ವರ್ಷದಲ್ಲಿ ನೀಡಿ ಗೌರವಿಸಿರುವುದು, ಹವ್ಯಕ ಸಮಾಜವೇ ಹೆಮ್ಮೆ ಪಟ್ಟುಕೊಳ್ಳುವಂಥದ್ದಾಗಿದೆ ಎಂದ ಇವರು ಶರ್ಮಾ ಅವರು ಬರೆದ ಗ್ರಂಥ ಕೃತಿಗಳನ್ನು ಪ್ರತಿ ಸೀಮಾ ಪ್ರತಿನಿಧಿ ಪರಿಷತ್ತಿನವರು ಹವ್ಯಕ ಬಾಂಧವರಿಗೆ ವಿತರಿಸುವ ವ್ಯವಸ್ಥೆ ಹಮ್ಮಿಕೊಳ್ಳಬೇಕು ಎಂದು ಹೇಳಿದರು.

ಈ ಒಂದು ಸನ್ಮಾನ ಸಮಾರಂಭದ ವೇದಿಕೆಯಲ್ಲಿ ಅತಿಥೇಯರಾಗಿ, ದೊಡ್ಮನೆ ಗಣೇಶ ಹೆಗಡೆ, ಸೀಮಾ ಪ್ರತಿನಿಧಿ ಪರಿಷತ್ ಅಧ್ಯಕ್ಷ ವೆಂಕಟಗಿರಿ ಹೆಗಡೆ ಬನದಕೊಪ್ಪ, ವಿದ್ವಾನ್ ಭಾಸ್ಕರ ಭಟ್ಟರು ಭೀಮನಕೋಣೆ ಮತ್ತು ಮಹಾಬಲ ಭಟ್ಟರು ಹೊಡಬಟ್ಟೆ ಇವರುಗಳು ಉಪಸ್ಥಿತರಿದ್ದರು. ಸಂಸ್ಥಾನದ ಪ್ರತಿನಿಧಿಯಾಗಿ ಟಿ.ಡಿ. ರಘುಪತಿ ಇವರು ಆಗಮಿಸಿದ್ದರು.

ಮೊದಲಿಗೆ ಶ್ರೀಮತಿ ಅನ್ನಪೂರ್ಣ ಎನ್. ಮೂರ್ತಿ ಪ್ರಾರ್ಥನೆಗೈದ ಬಳಿಕ ಕ್ಯಾಸನೂರು ಸೀಮಾ ಪ್ರತಿನಿಧಿ ಪರಿಷತ್‌ನ ಕಾರ್ಯದರ್ಶಿ ಎನ್. ರಾಮಚಂದ್ರ ಪ್ರಾಸ್ತಾವಿಕವಾಗಿ ಮಾತನಾಡಿ ಸರ್ವರನ್ನೂ ಸ್ವಾಗತಿಸಿದರು. ಕೊನೆಯಲ್ಲಿ ಸೀಮಾ ಪ್ರತಿನಿಧಿ ಪರಿಷತ್ ಉಪಾಧ್ಯಕ್ಷರಾದ ಹೆಚ್. ಪ್ರಭಾಕರ ಹೆಗಡೆ, ಹೊಸಬಾಳೆ ಇವರು ವಂದನೆಗೈದರು. ಈ ಸಮಾರಂಭದ ಪ್ರಯುಕ್ತ ಹೆಚ್. ಪ್ರಭಾಕರ ಹೆಗಡೆ, ಹೊಸಬಾಳೆ ಇವರು ವಂದನೆಗೈದರು. ಈ ಸಮಾರಂಭದ ಪ್ರಯುಕ್ತ ರಂಗನಾಥ ಶರ್ಮರು ಬರೆದ ಗ್ರಂಥ ಬಂಡಾರದ ಪ್ರದರ್ಶನ ಏರ್ಪಡಿಸಲಾಗಿತ್ತು.

– ಬಿ.ಎನ್.ಸಿ. ರಾವ್, ಬರಿಗೆ

### ಗಣಪತಿ ಬ್ಯಾಂಕಿಗೆ ಹೊಸ ಅಧ್ಯಕ್ಷರು

ಸಾಗರದ ಎಸ್. ಗಣಪತಿ ಶೆಟ್ಟಿಯವರು ತಾ. 5-11-2001ರಂದು ನಡೆದ ಗಣಪತಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಸಾಗರ ಇದರ ಅಧ್ಯಕ್ಷರ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.